# ನಂಬಿಕೆಯ ನೂಲು

# ಗಿರಿಯಪ್ಪನ ಗಿಳಿ ಶಾಸ್ತ್ರದಿಂದ ದೇವಪ್ಪನ ಹೋಟೆಲ್ ಏಳಿಗೆ

■ ಬಸು ಬೇವಿನಗಿಡದ
ಕಲೆ: ಎಚ್‌.ಎಸ್. ಮೋನಪ್ಪ

ಪಾಲಕರಲ್ಲಿ ನಂಬಿಕೆ ಹುಟ್ಟುವ ಕೆಲವು ತಂತ್ರಗಳನ್ನು ದುಂಡಪ್ಪ ಶಿವಪುತ್ರಪ್ಪ ಕಾಕಾನಿಂದ ಕಲಿತಿದ್ದ. ಶಿವಪುತ್ರಪ್ಪ ಮೂರು ಸಲ ಮದುವೆಯಾದವನು. ಹಿರಿಯ. ಏನಿಲ್ಲವೆಂದರೂ ಎಪ್ಪತ್ತು ವರ್ಷ. ಈ ಊರಿನ ಬಗ್ಗೆ ಅವನಷ್ಟು ತಿಳಿದವರು ಯಾರೂ ಇರಲಿಕ್ಕಿಲ್ಲ. ಆದರೆ ಏನೂ ಗೊತ್ತಿಲ್ಲದವರ ತರಹ ಇರುತ್ತಾನೆ. ದುಂಡಪ್ಪ ಒಂದು ಮನೆಯಲ್ಲಿ ಬಾಡಿಗೆ ಇದ್ದಾನೆ. ತಾನೊಬ್ಬನೇ ಅನ್ನ ಸಾಂಬಾರು ಮಾಡಿಕೊಂಡು ಉಣ್ಣುತ್ತಾನೆ. ಮಾಯಕ್ಕಳೇ ಇತ್ತೀಚೆಗೆ ಒಂದೊಂದು ಸಲ ರೊಟ್ಟಿಪಲ್ಯ ಕಳುಹಿಸುತ್ತಾಳೆ.

‘ಮಾಯಕ್ಕ, ನಿನ್ನ ಮನಸ್ಸು ಬಂಗಾರದ್ದು ಯವ್ವಾ. ನಾ ಹೋಗಿ ಹೋಗಿ ಎಂತಹ ಪಾಪಿಗೆ ಸಹಾಯ ಮಾಡಿದ್ನಿ ಅಂತ ಅನಿಸ್ತದ. ಏನು ಮಾಡೋದು ಹೇಳು? ಆವಾಗಿನ್ನೂ ನೀನು ಈ ಊರಿಗೆ ಬಂದಿರಲಿಲ್ಲ. ದೇವ್ಯಾಗ ಯಾರೂ ಹೆಣ್ಣು ಕೊಡಲಿಕ್ಕೆ ತಯಾರು ಇರಲಿಲ್ಲ. ನಾನೇ ಅನಸವ್ವನ ಮನೆಯವರಿಗೆ ಹೇಳಿ, ಒತ್ತಾಯ ಮಾಡಿ, ಅವರು ಇದಕ್ಕ ಒಪ್ಪುವಂಗ ಮಾಡಿದೆ. ದೇವ್ಯಾನಂತಹ ಹೃದಯವಂತ ಮನಷಾ ಯಾರೂ ಇಲ್ಲಂತ ಸುಳ್ಳು ಹೇಳಿದೆನವ್ವಾ. ನಾನು ಮತ್ತು ದುಂಡಪ್ಪ ಸಾವಿರ ಸುಳ್ಳು ಹೇಳಿ ಅಂವನ ಮದುವಿ ಮಾಡಿದ್ವಿ.’

‘ಹೋಗ್ಲಿ ಬಿಡ್ರಿ ಕಾಕಾ, ಏನು ಮಾಡೋದು ದೇವಪ್ಪನ ನಸೀಬು ದೇವಪ್ಪಗ, ನನ್ನ ನಸೀಬು ನನಗ. ಅನಸವ್ವನ ನಸೀಬು ಅನಸವ್ವಗ. ಒಟ್ಟಿನ್ಯಾಗ ಆಕಿ ಅಂವನ ಬಿಟ್ಟು ಹ್ವಾದ ಮ್ಯಾಲ ನಾ ಬಂದೆ. ನನಗೇನು ಅನಿಸ್ತದ ಅಂದ್ರ ನಿಮ್ಮ ದೇವಪ್ಪ ಆಕಿಗೂ ಮೋಸ ಮಾಡಿದ. ನನಗೂ ಮೋಸ ಮಾಡಿದ. ಇರಲಿ. ನೀವು ಮನಸ್ಸು ಬಿಚ್ಚಿ ಹಿಂದಿಂದು ಹೇಳೀರಿ. ಅಷ್ಟು ಸಾಕು ನನಗ.’

‘ನನ್ನ ಕ್ಷಮಿಸಿಬಿಡವಾ. ನೀನು ರೊಟ್ಟಿ ಕೊಟ್ಟಿದ್ದಕ್ಕ ನನ್ನ ಕೈಲಾದಷ್ಟು ಸಹಾಯ ಯಾವಾಗರ ಮಾಡೇ ಮಾಡ್ತೀನಿ.’

ಶಿವಪುತ್ರಪ್ಪ ತನ್ನ ಮಾತಿನಂತೆ ನಡೆದುಕೊಂಡ. ಹಿರಿಯ ಮನುಷ್ಯ ಅಂತ ಮಂದಿ ಅವನಿಗೆ ಬಹಳ ಗೌರವ ಕೊಡುತ್ತಿದ್ದರು. ಮಾಯಕ್ಕ ಪಂಚಾಯಿತಿ ಚುನಾವಣೆಗೆ ನಿಂತಾಗ ಬಹಳ ನೆರವಿಗೆ ಬಂದ. ಎಲ್ಲರ ಮನೆ ಮನೆಗೆ ಅಡ್ಡಾಡಿದ. ನಂಬಿಕೆ ಮತ್ತು ಪಾರದರ್ಶಕತೆ ಇಲ್ಲದ ಯಾವ ವ್ಯಕ್ತಿನೂ ರಾಜಕೀಯಕ್ಕೆ ಬರಬಾರದು. ಮಾಯಕ್ಕ ಈ ಊರನ್ನು ನಂಬಿ ಬಂದಿದ್ದಾಳೆ. ಅವಳ ನಂಬಿಕೆಗೆ ಊರು ಎಂದೂ ಮೋಸ ಮಾಡಬಾರದು. ಅವನ ಮಾತುಗಳಿಗೆ ಮಂದಿ ಬೆಲೆ ಕೊಟ್ಟರು. ಶಿವಪುತ್ರಪ್ಪ ಈಗ ಬಾಡಿಗೆ ಮನೆಯಲ್ಲಿ ಇದ್ದಾನೆ. ತನ್ನ ಜೀವನ ನಿರ್ವಹಣೆಗಾಗಿ ಯಾರ್‍ಯಾರನ್ನೋ ಆಶ್ರಯಿಸಬೇಕಾಗುತ್ತದೆ. ಆದರೆ ಆ ಕುರಿತು ಅವನಿಗೆ ಕಿಂಚಿತ್ತೂ ದುಃಖವಿದ್ದಂತೆ ತೋರುವುದಿಲ್ಲ. ಹಿಂದೆ ಇದೇ ಮಲ್ಲೂರಿನಲ್ಲಿ ಅವನಿಗೆ ನಾಲ್ಕು ಮನೆಗಳಿದ್ದವು. ಇಪ್ಪತ್ತು ಎಕರೆ ಫಲವತ್ತಾದ ಕಪ್ಪುಹೊಲವಿತ್ತು. ಮನೆಯಲ್ಲಿ ನಾಲ್ಕು ಎತ್ತಿನ ಕಮತ. ದೇವರಕೋಣೆಯ ಸಂದುಕದಲ್ಲಿ ಏನಿಲ್ಲವೆಂದರೂ ನೂರು ತೊಲೆ ಬಂಗಾರ! ಶಿವಪುತ್ರಪ್ಪನ ಹೆಂಡತಿ ರುದ್ರವ್ವ ಮೊದಲ ಹೆರಿಗೆಯಲ್ಲಿ ಏನೋ ತೊಂದರೆಯಾಗಿ ಅಸುನೀಗಿದಳು. ನಾಲ್ಕು ದಿನ ಬದುಕಿದ ಗಂಡುಮಗುವನ್ನು ಮಣ್ಣಲ್ಲಿಡುವಾಗ ಊರಿಗೆ

